


# ಆಡುತ್ತ... ಓಡುತ್ತ...

**ಕೊಕ್ಕೊ ವಿಶ್ವಕಪ್‌ನ ಚೊಚ್ಚಲ ಆವೃತ್ತಿಯಲ್ಲಿ ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಚಾಂಪಿಯನ್ ಆಗಿ ಚರಿತ್ರೆಯನ್ನು ರೂಪಿಸಿವೆ. ತಂಡಗಳನ್ನು ಪ್ರತಿನಿಧಿಸಿದ್ದ ಕರ್ನಾಟಕದ ಪ್ರತಿಭೆಗಳಾದ ಚೈತ್ರಾ ಮತ್ತು ಗೌತಮ್ ತಮ್ಮ ಅಪೂರ್ವ ಆಟದಿಂದ ವಿಶ್ವದ ಗಮನಸೆಳೆದಿದ್ದಾರೆ. ಅವರು ತಾವು ನಡೆದು ಬಂದ ದಾರಿ ಹಾಗೂ ಸಾಧನೆಯನ್ನು ‘ಸುಧಾ’ ಜೊತೆ ಹಂಚಿಕೊಂಡಿದ್ದಾರೆ.**

■ ನಿರೂಪಣೆ: **ರಾಘವೇಂದ್ರ ಕೆ. ತೊಗರ್ಸಿ**
ಚಿತ್ರ: ಕಿಶೋರ್ ಕುಮಾರ್ ಬೋಳಾರ್

ವಿಶ್ವಕಪ್ ಫೈನಲ್ ಪಂದ್ಯದಲ್ಲಿ ನನ್ನ ಡಿಫೆಂಡರ್ ಚೆನ್ನಾಗಿತ್ತು. ಅದಕ್ಕೆ ‘ಡ್ರೀಮ್ ರನ್ನರ್’ ಎಂದು ಕರೆಯುತ್ತಾರೆ. ಆದರೆ ನನಗೆ ವಿಶ್ವಕಪ್ ಆಡಿದೆ ಎನ್ನುವ ಹಮ್ಮು ಇಲ್ಲ. ಈ ಹಿಂದೆ ನ್ಯಾಷನಲ್ ಪ್ಲೇಯರ್ ಆಗಿ ಹೇಗೆ ಇದ್ದೆನೋ ಈಗಲೂ ಹಾಗೆಯೇ ಇದ್ದೇನೆ.

ವಿಶ್ವಕಪ್ ನಂತರ ಉತ್ತರಾಖಂಡದಲ್ಲಿ ಒಂದು ಟೂರ್ನಮೆಂಟ್ ಆಡಿ ಬಂದಿದ್ದೇನೆ. ಪಂದ್ಯ ಯಾವುದೇ ಇರಲಿ ಮೊದಲಿನಂತೆಯೇ ಆಡುತ್ತಿದ್ದೇನೆ. ಕರ್ನಾಟಕ ತಂಡವನ್ನು ಪ್ರತಿನಿಧಿಸಿದಾಗ ಕರ್ನಾಟಕ ತಂಡಕ್ಕೆ ಆಡುತ್ತಿದ್ದೆ. ಅಂತರರಾಷ್ಟ್ರೀಯ ಸ್ಪರ್ಧೆಗೆ ಭಾರತವನ್ನು ಪ್ರತಿನಿಧಿಸಿದಾಗ ಸಹಜವಾಗಿ ಭಯ ಕಾಡುತ್ತಿತ್ತು. ಶಾಲಾಮಟ್ಟದಿಂದ ನನ್ನ ಆಟವನ್ನು ಬೆಳೆಸಿಕೊಂಡು ಬಂದಿರುವ ನಾನು ಈ ಪಂದ್ಯವನ್ನು ಜಿಲ್ಲೆ–ರಾಜ್ಯ ಮಟ್ಟಕ್ಕೆ ಆಡುತ್ತಿಲ್ಲ. ಇಲ್ಲವೇ ಯಾವುದೋ ಕ್ಲಬ್ಬಿಗೆ ಆಡುತ್ತಿಲ್ಲ. ನನ್ನ ದೇಶಕ್ಕಾಗಿ ಆಡುತ್ತಿದ್ದೇನೆ ಎನ್ನುವ ಭಯ ಇತ್ತು.

ಓಟದಲ್ಲಿ ನಾನು ಚುರುಕಿದ್ದೇನೆ ಎನ್ನುವ ಕಾರಣಕ್ಕೆ ವಿಶ್ವಕಪ್ ಟೂರ್ನಮೆಂಟ್ ಫೈನಲ್ ಪಂದ್ಯದಲ್ಲಿ ಡಿಫೆಂಡರ್ ಆಗಿ ಮೊದಲ ಬ್ಯಾಚ್‌ನಲ್ಲೇ ನನ್ನನ್ನು ಕಳಿಸಿದರು. ನಾವು ಗೆದ್ದ ಮೇಲೆ ಖುಷಿ ಆಯಿತು. ವಿಶ್ವಕಪ್ ಗೆದ್ದ ಮೇಲೆ ನಮ್ಮೂರಲ್ಲಿ ‘ಚೈತ್ರೋತ್ಸವ’

> ವಿಶ್ವಕಪ್ ಪಂದ್ಯ ಆಡಲು ಭಾರತ ಕೊಕ್ಕೊ ಮಹಿಳಾ ತಂಡಕ್ಕೆ ದಕ್ಷಿಣ ಭಾರತದಿಂದ ನಾನೊಬ್ಬಳೇ ಪ್ರತಿನಿಧಿ. ಒಂದು ಕಾಲದಲ್ಲಿ ಟೀವಿಯಲ್ಲಿ ಆಟವನ್ನು ನೋಡಿ ಖುಷಿಪಡುತ್ತಿದ್ದೆ. ಈಗ ನಾನು ಆಡುವುದೇ ಟೀವಿಯಲ್ಲಿ ಬರುತ್ತಿದೆ. ನನಗೂ ಫ್ಯಾನ್ಸ್ ಆಗಿದ್ದಾರೆ. ವಿಶ್ವಕಪ್ ಗೆದ್ದ ತಕ್ಷಣ ಸೆಲ್ಫಿ ತೆಗೆದುಕೊಳ್ಳಲು ಕ್ರೀಡಾಪ್ರೇಮಿಗಳು ಮುಗಿಬಿದ್ದಿದ್ದು ಮರೆಯದ ನೆನಪು.
>
> **–ಚೈತ್ರಾ, ವಿಶ್ವಕಪ್ ಕೊಕ್ಕೊ ಆಟಗಾರ್ತಿ**